ಮೈಸೂರಿನಲ್ಲಿ ವಿವಿಧ ಇಲಾಖೆಗಳ ರಸ್ತೆಗಳನ್ನು ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ

1653 (2242) : ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮೈಸೂರು ಮಹಾನಗರ ಪಾಲಿಕೆಯ ಕಾರ್ಯವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳ ರಸ್ತೆಗಳು ಯಾವುವು;

(ಆ) ಈ ರಸ್ತೆಗಳನ್ನು ಅನುದಾನದ ಸಮೇತ ಮೈಸೂರು ಮಹಾನಗರ ಪಾಲಿಕೆಗೆ ಈಗಾಗಲೇ ಬೆಂಗಳೂರಿನಲ್ಲಿರುವ ವ್ಯವಸ್ಥೆಯಂತೆ ಹಸ್ತಾಂತರಿಸುವ ಬಗ್ಗೆ ಸರ್ಕಾರದ ನಿಲುವೇನು: ವಿವರ ಒದಗಿಸುವುದು;

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಮೈಸೂರು ಮಹಾನಗರ ಪಾಲಿಕೆಯ ಕಾರ್ಯವ್ಯಾಪ್ತಿಯಲ್ಲಿ ಒಟ್ಟು 1151 ಕಿ. ಮೀ. ಉದ್ದದ ರಸ್ತೆಗಳು ಇರುತ್ತವೆ. ಇದರಲ್ಲಿ 32 ಕಿ. ಮೀ. ಉದ್ದ ಲೋಕೋಪಯೋಗಿ ಇಲಾಖೆಗೂ ಹಾಗೂ 26 ಕಿ. ಮೀ. ಉದ್ದ ಮೈಸೂರು ಯೂನಿವರ್ಸಿಟಿಗೂ ಸೇರಿರುತ್ತದೆ. ಉಳಿದ 1093 ಕಿ. ಮೀ ಉದ್ದದ ರಸ್ತೆಗಳು ಮೈಸೂರು ಮಹಾನಗರ ಪಾಲಿಕೆಗೆ ಸೇರಿರುತ್ತದೆ.

(ಆ) ಸದ್ಯಕ್ಕೆ ಆ ರೀತಿಯ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ರಾಜ್ಯದಲ್ಲಿ ನಷ್ಟದಲ್ಲಿರುವ ಸಣ್ಣ ಕೈಗಾರಿಕಾ ಘಟಕಗಳ ಬಗ್ಗೆ.

1655 (1911) : ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸಣ್ಣ ಕೈಗಾರಿಕಾ ಘಟಕಗಳಿವೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಇವುಗಳಲ್ಲಿ ನಷ್ಟದಲ್ಲಿರುವ ಸಣ್ಣ ಕೈಗಾರಿಕಾ ಘಟಕಗಳು ಎಷ್ಟು;

(ಇ) ನಷ್ಟದಲ್ಲಿರುವ ಘಟಕಗಳಿಗೆ ಚೈತನ್ಯ ನೀಡಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

(ಅ) 2.48 ಲಕ್ಷ, ಅನುಬಂಧ - 1 ರಲ್ಲಿ ವಿವರ ನೀಡಲಾಗಿದೆ.

(ಆ) ಇಲಾಖೆಯು ಸಣ್ಣ ಕೈಗಾರಿಕೆಗಳ ಲಾಭ ನಷ್ಟದ ವಿವರಗಳನ್ನು ಕ್ರೋಢೀಕರಿಸುತ್ತಿಲ್ಲ. ಆದರೆ ರೋಗಗ್ರಸ್ಥ ಕೈಗಾರಿಕಾ ಘಟಕಗಳನ್ನು ಗುರುತಿಸುತ್ತಿದ್ದು, ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಮಾದರಿ ಸಮೀಕ್ಷೆಯನ್ನು ನಡೆಸಲಾಗಿದೆ. ಅದರಂತೆ, ಟೆಕ್ಸಾಕ್‌ರವರು, 1164 ಘಟಕಗಳ ಮಾದರಿ ಸಮೀಕ್ಷೆಯನ್ನು ನಡೆಸಿದ್ದು ಶೇಕಡ 5.4 ರಷ್ಟು ಘಟಕಗಳು ರೋಗಗ್ರಸ್ಥವಾಗಿರುವುದೆಂದು ಶೇ. 15.64 ರಷ್ಟು ಘಟಕಗಳು ರೋಗಗ್ರಸ್ಥವಾಗುವ ಅಂಚಿನಲ್ಲಿವೆಯೆಂದು ಹಾಗೂ ಶೇ. 28 ರಷ್ಟು ಘಟಕಗಳು ಸ್ಥಗಿತಗೊಂಡಿವೆಯೆಂದು ತಿಳಿದುಬಂದಿದೆ.

(ಇ) ರೋಗಗ್ರಸ್ಥವಾಗಿರುವ ಸಣ್ಣ ಕೈಗಾರಿಕಾ ಘಟಕಗಳಿಗೆ ಚೈತನ್ಯ ನೀಡುವ ದೃಷ್ಟಿಯಿಂದ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ಪ್ರತ್ಯೇಕವಾದ ನೀತಿಯನ್ನು 1996 ರಲ್ಲಿ ರೂಪಿಸಲಾಗಿದೆ. ಅದರಂತೆ ರಿಯಾಯಿತಿ ಮತ್ತು ಸೌಲಭ್ಯಗಳನ್ನು ನೀಡಲಾಗುತ್ತಿದೆ.

1. ಭಾರತೀಯ ರಿಸರ್ವ್ ಬ್ಯಾಂಕ್ ಪರಿಭಾಷೆಯಲ್ಲಿ ಬರುವ ಕೈಗಾರಿಕೆಗಳಿಗೆ ರೂ. 2.50 ಲಕ್ಷಗಳಿಗೆ ಮಿತಿಗೊಳಪಟ್ಟು ಬೀಜಧನ ಸಾಲ ಸಹಾಯ.
2. ಮಾರಾಟ ತೆರಿಗೆ ಬಾಕಿ ಪಾವತಿಯ ಕಂತುಗಳನ್ನು ಮುಂದೂಡುವುದು.
3. ಕೆಇಬಿಯಿಂದ ವಿದ್ಯುತ್ ದರ ಮತ್ತು 3 ಎಂಎಂಡಿ ಇವುಗಳ ಬಾಕಿಯನ್ನು ಬಡ್ಡಿಯಿಲ್ಲದೆ ಮುಂದೂಡುವುದು ಹಾಗೂ ಸುಸ್ತಿಬಡ್ಡಿಯನ್ನು ಮನ್ನಾ ಮಾಡುವುದು.
4. ಕೆಐಎಡಿಬಿ: ಕೆಎಸ್‌ಎಸ್‌ಐಡಿಸಿ: ಕಿಯೋನಿಕ್ಸ್ ಸಂಸ್ಥೆಗಳ ಸಾಲದ ಬಾಕಿ ಕಂತುಗಳ ಮುಂದೂಡಿಕೆ.
5. ಕಾರ್ಮಿಕ ಇಲಾಖೆಯ ಮುಖಾಂತರ ಕಾರ್ಮಿಕರ ವ್ಯಾಜ್ಯಗಳನ್ನು ಬಗೆಹರಿಸುವುದು.
6. ಅಭಿವೃದ್ಧಿ ಸಾಲದ ಕಂತುಗಳ ಮುಂದೂಡಿಕೆ.

ಸಣ್ಣ ಕೈಗಾರಿಕೆಗಳು ರೋಗಗ್ರಸ್ಥವಾಗುವುದನ್ನು ತಡೆಯಲು ಮತ್ತು ಮಾರುಕಟ್ಟೆಯಲ್ಲಿ ಅವರು ಉತ್ಪಾದಿಸುತ್ತಿರುವ ವಸ್ತುಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಘಟಕಗಳ ಆಧುನೀಕರಣ, ತಾಂತ್ರಿಕ ಉನ್ನತೀಕರಣ, ಗುಣಮಟ್ಟ ನಿಯಂತ್ರಣ ಇತ್ಯಾದಿಗಳನ್ನು ಪಡೆಯಲು ಸಹಾಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಹಾಗೂ ಐಎಸ್‌ಓ ಪಡೆಯುವ ಘಟಕಗಳಿಗೆ ರೂ. 75,000.00 ಸಹಾಯಧನ ನೀಡಲಾಗುತ್ತಿದೆ. ಸಣ್ಣ ಕೈಗಾರಿಕೆಗಳು ಆಧುನೀಕರಣ ಹೊಂದಲು ಹೂಡುವ ಬಂಡವಾಳದ ಶೇ. 10 ರಷ್ಟು ಸಹಾಯಧನ ನೀಡಲಾಗುವುದು.

ANNEXURE -I

Statement showing Dist. Wise SSI Regn. Cumulative Figure up to Jan. 2000

Sl. No.	Name of the Districts	Dist. Wise cumulative figure
01.	Bangalore (U)	45950
02.	Belgaum	23481
03.	Bellary	10134
04.	Bijapur	8456
05.	Bidar	5659
06.	Chickmagalur	4243
07.	Chitradurga	8164
08.	Kodagu	2565
09.	Dharwad	19861
10.	Gulbarga	9233
11.	Hassan	6548
12.	Karwar (U.K)	5436
13.	Mangalore (D.K)	16185
14.	Kolar	9476
15.	Mandya	5754
16.	Mysore	21011
17.	Raichur	8367
18.	Shimoga	11336
19.	Tumkur	14781

20.	Bangalore (R)	10754
21.	Bagalkote	217
22.	Chamarajanagar	169
23.	Davanagere	268
24.	Gadag	253
25.	Haveri	145
26.	Koppal	99
27.	Udupi	285
	Total	248829

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: (ಅ) ಚುಕ್ಕೆ ಗುರ್ತಿನ ಮತ್ತು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಉತ್ತರ ಬಾರದಿರುವ ಬಗ್ಗೆ.

ಅಧ್ಯಕ್ಷರು : ಮಂಡಿಸಲಾಯಿತು, ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಶೂನ್ಯ ವೇಳೆಯಲ್ಲಿ ತಾವು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಕೇಳಿದ್ದಿರಿ. ಪ್ರಾರಂಭ ಮಾಡಿ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಕಳೆದ ವಾರ ನಾನು ಕೇಳಿದ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ ಬಂದಿರಲಿಲ್ಲ. ಇದರ ಬಗ್ಗೆ ತಮ್ಮ ಕಛೇರಿಯಲ್ಲಿ ಭೇಟಿ ಮಾಡಿ ಹೇಳಿದಾಗ ಮುಂದಿನ ವಾರ ಖಂಡಿತ ಕೊಡಿಸೋಣ ಎನ್ನತಕ್ಕಂಥ ಭರವಸೆಯನ್ನು ಸಹ ತಾವು ಕೊಟ್ಟಿರಿ. ಮತ್ತು ಮೊನ್ನೆಯ ದಿವಸ ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಬಂದಿತ್ತು. ಅದರಲ್ಲಿ 3 ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದು ಉಳಿದ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸುತ್ತೇವೆಂದು ಹೇಳಿದರು. ಇಲ್ಲಿಯವರೆಗೆ ಅದಕ್ಕೂ ಕೂಡ ಉತ್ತರವನ್ನು ಒದಗಿಸಿಲ್ಲ. ಚುಕ್ಕೆ ಗುರುತಿನ ಪ್ರಶ್ನೆ ಆಗಲೀ, ಚುಕ್ಕೆ ರಹಿತ ಪ್ರಶ್ನೆ ಆಗಲೀ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೇಳಿದರೆ ಯಾವುದಕ್ಕೂ ಕೂಡ ಇದುವರೆಗೆ ಉತ್ತರ ಬಂದಿಲ್ಲವೆಂದು ಸದನದ ಮೂಲಕ ತಮ್ಮ ಗಮನಕ್ಕೆ ತರುತ್ತೇನೆ. ನಾನು ಕೇಳಿರತಕ್ಕಂಥ ಚುಕ್ಕೆ ಗುರುತಿನ ಪ್ರಶ್ನೆಗೆ ತುರ್ತಾಗಿ ಮುಂದಿನ ವಾರದಲ್ಲಾದರೂ ಉತ್ತರ ಕೊಡಿಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಹಾಗೆಯೇ ಚುಕ್ಕೆ ರಹಿತ ಪ್ರಶ್ನೆಗೆ ಬರಬೇಕಾಗಿದ್ದ ಉಳಿದ ಉತ್ತರವನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡಬೇಕು ಎಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.